ಆರ್.ಟಿ.ಓ. ಪರಿಮಿತಿ

2757 (3630); ಶ್ರೀ ಪಿಳ್ಳ ಮುನಿಶಾಮಪ್ಪ (ದೇವನಹಳ್ಳಿ)

ಅ) ದೇವನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಆರ್.ಟಿ.ಓ. ಪರಿಮಿತಿ ಎಲ್ಲಿಯವರೆಗೂ ಒಳಪಟ್ಟಿದೆ;

ಆ) ಆರ್.ಟಿ.ಓ. ಕಛೇರಿಯಲ್ಲಿ ಎಷ್ಟು ಜನ ಅಧಿಕಾರಿ/ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ; ಸದರಿಯವರು ಸಾರ್ವಜನಿಕರಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) 2013–14 ಮತ್ತು 2014–15 ನೇ ಸಾಲಿನಲ್ಲಿ ವಸೂಲಾದ ದಂಡದ ಹಣವೆಷ್ಟು; ಇದು ಸರ್ಕಾರಕ್ಕೆ ಜಮಾ ಆಗಿದೆಯೇ (ಸಂಪೂರ್ಣ ವಿವರ ನೀಡುವುದು);

ಈ) ರಾಜ್ಯದಲ್ಲಿ ಎಷ್ಟು ವಾಹನಗಳನ್ನು ನಿಷ್ಕ್ರಿಯಗೊಳಿಸಲಾಗಿದೆ? (ಹಿಂದಿನ 3 ವರ್ಷಗಳ ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) ದೇವನಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿ ಇದ್ದು, ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕುಗಳು ಇದರ ಪರಿಮಿತಿಯಲ್ಲಿ ಬರುತ್ತವೆ.

ಆ) ದೇವನಹಳ್ಳಿ ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಒಬ್ಬರು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಮತ್ತು 14 ಮಂದಿ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ.

ಸಾರ್ವಜನಿಕರ ಕೆಲಸಗಳನ್ನು 'ಸಕಾಲ' ಸೇವೆಯಡಿಯಲ್ಲಿ ಮತ್ತು ನಾಗರೀಕ ಸನ್ನದ್ದಿನಲ್ಲಿ ನಿಗದಿಪಡಿಸಿರುವ ಕಾಲಮಿತಿಯಲ್ಲಿ ವಿಲೇವಾರಿ ಮಾಡಲಾಗುತ್ತಿದ್ದು, ಅಂತಹ ಯಾವುದೇ ದೂರುಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) 2013–14 ರಲ್ಲಿ ₹ 1,20,28,530/– ಮತ್ತು 2014–15 ರಲ್ಲಿ ₹ 52,09,478/– ಗಳಂತೆ ಒಟ್ಟಾರೆ ₹ 1,72,38,008/– ಮೊತ್ತದ ದಂಡವನ್ನು ವಸೂಲಿ ಮಾಡಲಾಗಿದ್ದು, ಅದನ್ನು ಸರ್ಕಾರದ ಖಜಾನೆಗೆ ಜಮೆ ಮಾಡಲಾಗಿದೆ.

ಈ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ನಿಷ್ಕ್ರಿಯಗೊಳಿಸಿರುವ ಒಟ್ಟು ವಾಹನಗಳ ಸಂಖ್ಯೆ: 4277. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ: 3630 ರಅನುಬಂಧ		
ಕ್ರ. ಸಂ	ಜಿಲ್ಲೆಯ ಹೆಸರು	ನಿಷ್ಕ್ರಿಯಗೊಳಿಸಲಾದ ವಾಹನಗಳ ಸಂಖ್ಯೆ
1	ಬೆಂಗಳೂರು (ನಗರ)	612
2	ಬೆಂಗಳೂರು (ಗ್ರಾ)	20
3	ಬಾಗಲಕೋಟೆ	65
4	ಬೆಳಗಾವಿ	277
5	ಬಳ್ಳಾರಿ	81
6	ಬೀದರ್	32
7	ಬಿಜಾಪುರ	350
8	ಚಾಮರಾಜ ನಗರ	26
9	ಚಿಕ್ಕಬಳ್ಳಾಪುರ	12
10	ಚಿಕ್ಕಮಗಳೂರು	9
11	ಚಿತ್ರದುರ್ಗ	59
12	ದಕ್ಷಿಣಕನ್ನಡ	337
13	ದಾವಣಗೆರೆ	184
14	ಧಾರವಾಡ	1030
15	ಗದಗ	50
16	ಕಲಬುರಗಿ	140
17	ಹಾಸನ	92
18	ಹಾವೇರಿ	9
19	ಕೊಡಗು	35
20	ಕೋಲಾರ	12
21	ಕೊಪ್ಪಳ	28
22	ಮಂಡ್ಯ	19
23	ಮೈಸೂರು	122
24	ರಾಯಚೂರು	6
25	ರಾಮನಗರ	0
26	ಶಿವಮೊಗ್ಗ	128
27	ತುಮಕೂರು	140
28	ಉಡುಪಿ	284
29	ಉತ್ತರ ಕನ್ನಡ	106
30	ಯಾದಗಿರಿ	12
ಒಟ್ಟು		4277